# ದಾಸ ಮತ್ತು ಕವಿ

ದಾಸ ಮತ್ತು ಕವಿ ಈ ಎರಡು ಮನೋಧರ್ಮಗಳೂ ಆಂತರಿಕವಾಗಿ ಹತ್ತಿರ ಇವೆ. ದಾಸನೆಂದರೆ ಸ್ವ–ಕೇಂದ್ರಿತ ದೃಷ್ಟಿಕೋನವನ್ನು ತೊರೆದವನು. ಸ್ವ–ದ ಜಾಗೆಯಲ್ಲಿ ಹರಿಯೋ, ಹರನೋ, ಗುಹೇಶ್ವರನೋ, ಕೂಡಲಸಂಗಮನೋ ಅಥವಾ ಇನ್ನಾವುದೋ ವಿಶ್ವ ಮನಸ್ಸಿನ ಪ್ರತೀಕವಾದ ದೇವರನ್ನು ಇಟ್ಟುಕೊಂಡವನು; ಕಂಡುಕೊಂಡವನು. ವಿಶ್ವಚಿತ್ತವು ಸತ್ಯ ಎಂದು ನಂಬಿದವನು. ಸತ್ಯ ಎಂದರೆ ಸ್ವ–ತಂತ್ರ ಎಂದು. ಆದ್ದರಿಂದ ತನ್ನದ್ದಾದ ವೈಯಕ್ತಿಕ ಚಿತ್ತವೃತ್ತಿಯನು ವಿಶ್ವಚಿತ್ತಕ್ಕೆ ಅಧೀನವನ್ನಾಗಿಸಿ, ತಾನು ಅ–ಸ್ವತಂತ್ರ, ಆದ್ದರಿಂದ ದಾಸ ಎನ್ನಿಸಿಕೊಂಡವನು. ಈ ದಾಸ್ಯದ ಅವಸ್ಥೆಯಲ್ಲಿಯೇ ವಿಚಿತ್ರವಾದ ಸ್ವಾತಂತ್ರ್ಯವನ್ನು ಅನುಭವಿಸಿ ಅದನ್ನು ದೇವರ ಮಹಿಮೆ ಎಂದು ಹಾಡುವವನು! ಹಾಡುವುದು ದಾಸನಿಗೆ ಮುಖ್ಯ. ಈ ದಾಸ್ಯದ ಅವಸ್ಥೆಯಲ್ಲಿಯೇ ಮನೋ–ಬುದ್ಧಿಗಳಲ್ಲಿರುವ ತರ್ಕದ ಕಾಠಿಣ್ಯ ಕರಗಿ, ಅಂತಃಕರಣದ ಸಹಜ ಗುಣವಾದ ಕರಗುವಿಕೆ, ನಮನೀಯತೆ ಸಿದ್ಧಿಸಿ, ಆ ಕರಗುವಿಕೆಯಿಂದಾಗಿಯೇ ಸೃಜನಶೀಲತೆ ಉಕ್ಕಿ– ಹಾಡುವುದು ಅನಿವಾರ್ಯವಾದವನು.

ಕವಿಗೂ ಹಾಡುವುದು ಅನಿವಾರ್ಯ. ಕವಿಯಾದವನೂ ಸ್ವ–ಕೇಂದ್ರಿತ ದೃಷ್ಟಿಯಿಂದ ಲೋಕವನ್ನು ನೋಡುವವನಲ್ಲ. ಹಾಗೆ ನೋಡುವವನಾದರೆ ಇನ್ನೊಂದು ಪಾತ್ರಕ್ಕೆ ಅವನು ನ್ಯಾಯ ಸಲ್ಲಿಸಲಾರ. ಅದದನ್ನು ಅದರದರ ಬೆಳಕಿನಲ್ಲೇ ಯೇ ನೋಡಲು ಸಾಧ್ಯವಾಗದೆ ಇದ್ದರೆ ಎಂಥ ಕವಿತ್ವ? ಎಲ್ಲಿಯ ಕವಿತ್ವ? ಆದ್ದರಿಂದಲೇ ಕವಿಗೂ–ದಾಸನಿಗೂ ಆಂತರಿಕ ಬಂಧುತ್ವ ಇದೆ. ಅವರಿಬ್ಬರೂ ಹತ್ತಿರ ಇದ್ದಾರೆ. ಹಾಗೆಂದು ವ್ಯತ್ಯಾಸವೂ ಇದೆ. ವ್ಯತ್ಯಾಸವಿರುವುದು ಈ ಎರಡು ಮನೋಧರ್ಮಗಳ ವಿಶಿಷ್ಟ ಎಚ್ಚರದಲ್ಲಿ.

ಕವಿಗೆ ಸಾಮಾಜಿಕವಾದ ಎಚ್ಚರ ಮುಖ್ಯ. ಪೂರ್ವನಿಯೋಜಿತವಾದ ಯಾವುದೋ ಉತ್ತರವನ್ನಿಟ್ಟುಕೊಂಡು ಆ ಉತ್ತರ ಎಷ್ಟು ಜನಪ್ರಿಯವಾಗಿರಲಿ, ಎಲ್ಲ ಸಮಸ್ಯೆಗಳನ್ನೂ ಸರಳಗೊಳಿಸುವುದು ನಿಜವಾದ ಕವಿಗೆ ಕಷ್ಟ. ಆದರೆ, ಒಬ್ಬ ದಾಸನಲ್ಲಿ ಅದುವರೆಗೆ ಕಾಣದ ಸೃಜನಶೀಲತೆ, ಅವನು ದಾಸನಾದ ಮೇಲೆ ಇದ್ದಕ್ಕಿದ್ದಂತೆ ಉಕ್ಕಿ ಬಂದ ಪವಾಡವನ್ನು ಕಂಡು ಇದು ಎಂಥ ಆವೇಶ! ಇದುವರೆಗೆ ಎಲ್ಲಿತ್ತು? ಈ ದಾಸ ಹೇಳುವುದೆಲ್ಲ ಈ ಬಾಳಿನಲ್ಲಿಯೇ ಇದ್ದುದಾದರೂ ಇದುವರೆಗೆ ಇದೇಕೆ ವ್ಯಕ್ತವಾಗಲಾರದೇ ಹೋಯಿತು? ದೇವರನ್ನು ಕಟ್ಟಿಕೊಂಡರೆ ಇಂಥ ಸೃಜನಶೀಲತೆ ಸಾಧ್ಯವೆ? ಆದರೂ ಯಾಕೆ ಎಲ್ಲರಿಗೂ ಇದು ಸಾಧ್ಯವಾಗುವುದಿಲ್ಲ? ದಾಸ್ಯ ಕಷ್ಟವೆ? ದಾಸ್ಯವೂ ಕಷ್ಟವೆ? ಕಷ್ಟವಾಗುವುದಕ್ಕೇನು ಕಾರಣ? ಕಷ್ಟವಾದರೂ ಸೂಕ್ಷ್ಮವಾಗಿ ನೋಡಿದರೆ ನಾವು ನಮ್ಮದಾಸರೇ ಆಗಿದ್ದೇವಲ್ಲ. ನಮ್ಮ ಭಾವನೆಗಳು ನಮ್ಮನ್ನಾಳುತ್ತಿವೆ ಎಂದರೆ ನಾವು ನಮ್ಮ ದಾಸರೆಂದೇ ಅಲ್ಲವೆ? ಆದರೂ ದಾಸನ ಹಾಡುಗಳಲ್ಲಿ ಕಾಣುವ ಸತ್ಯ ಹಾಡಿನ ಸತ್ಯಗಳಾಗಿವೆಯೇ ವಿನಾ ಲೋಕದ ಸತ್ಯವಾಗಿ ಬದಲಾದದ್ದು ಕಂಡು ಬರುವುದಿಲ್ಲವಲ್ಲ. ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ಎಂಬ ಕೇದಾರ ಗೌಳದ ಪಲಕು ಕೇಳುವುದಕ್ಕೆ ಸಂತೋಷವಾದರೂ ಅದು ಲೋಕದಲ್ಲಿ ಕಂಡಿಲ್ಲವಲ್ಲ; ಅದರ ವಿರುದ್ಧವೇ ಕಂಡು ಬರುತ್ತಿದೆಯಲ್ಲ ಎಂದು ದಾಸನ ಬಗ್ಗೆ ಬೆರಗಾಗುವುದೂ ಸ್ವಲ್ಪ ಕೊರಗುವುದೂ ಕವಿಯ ಸಾಧ್ಯತೆ. ಕವಿಯ ಹಕ್ಕು. ಕರುಣಾಕರ ನೀಯೆನ್ನುವುದೇತಕೋ ಭರವಸೆ ಇಲ್ಲೆನಗೆ ಎಂದು ದಾಸ ಹಾಡಬಲ್ಲವನಾದರೂ ಇಷ್ಟ ದೈವದ ಜತೆ ಅವನು ಈ ಧಾಟಿಯಲ್ಲಿ ಮಾತನಾಡಬಲ್ಲವನಾದರೂ ಅಥವಾ ತನ್ನನ್ನು ತೋಡಿಕೊಳ್ಳಬಲ್ಲವನಾದರೂ ಅದು ತೋಡಿಕೊಳ್ಳುವ ಸಂತೋಷಕ್ಕೆ ಮಾತ್ರವೋ ಅದರಾಚೆಯ ವಾಸ್ತವಕ್ಕೆ ವಿಸ್ತರಿಸಬಲ್ಲುದೋ ಎಂದು ಕವಿ ಪ್ರಾಮಾಣಿಕವಾಗಿ ಸಂದೇಹಿಸಬಲ್ಲ. ಅದು ಕವಿಯ ಸಾಧ್ಯತೆ. ದಾಸನ ಬಗ್ಗೆ ಅಗೌರವವಲ್ಲ. ದಾಸನಿಗೂ ತನ್ನನ್ನು ಇನ್ನೊಂದು ರೀತಿಯಲ್ಲಿ ಚಿಂತಿಸುವಂತೆ ಮಾಡಲು, ತನಗೆ ಕಾಣದ್ದನ್ನು ಕಾಣಿಸಲು, ದೇವರೇ, ಕವಿ ಮನಸ್ಸಿಗೆ ಈ ರೀತಿಯ ಚಿಂತನೆಯನ್ನು ಹೊಳೆಯಿಸುತ್ತಿದ್ದಾನೆ. ಎಂದು ಮತ್ತಷ್ಟು ಬೆರಗು! ಈ ಬೆರಗಿನ ಜತೆಗೆ ನಾನು ದೇವರನ್ನು ಎಲ್ಲ ಪ್ರಶ್ನೆಗಳಿಗೆ ಉತ್ತರವೆಂದು ಕಂಡುಕೊಂಡದ್ದು ನಿಜ. ಆದರೆ ಆ ಉತ್ತರವನ್ನು ಒಂದು ಸ್ಥಗಿತ ಉತ್ತರವೆಂದು ಈ ಕವಿ ಬಗೆಯುವುದೇ ಇವನ ಪೂರ್ವಗ್ರಹವಾಗಲಾರದೆ? ತನ್ನ ದೇವರೆಂದರೆ ದೋಣಿಯನ್ನು ಲಂಗರಿಗೆ ಕಟ್ಟಿದ ಹಗ್ಗವಲ್ಲ; ತನ್ನದೇವರೆಂದರೆ, ಆ ದೋಣಿಗೆ ವಾಯುವೇಗ ಸಿಗುವಂತೆ ಮಾಡುವ ಬಿಚ್ಚಿದ ಹಾಯಿಪಟ ಎಂದೇಕೆ ಈ ಕವಿಗೆ ಹೊಳೆಯುವುದಿಲ್ಲ?

ಇವನಿಗೆ ತನ್ನ ಅಂತಃಕರಣದ ಹಾಯಿಪಟ ಬಿಚ್ಚುವುದರಲ್ಲೇ ಅಪನಂಬಿಕೆಯೋ? ತಾನು ದೇವರನ್ನು ಉತ್ತರವೆಂದು ಬಗೆಯುವುದು ಹೌದು. ಆದರೆ ತನ್ನ ಪ್ರಶ್ನೆಯು ಜೀವಂತವಾದರೆ ಅದಕ್ಕೊಂದು ಉತ್ತರವೂ ಜೀವಂತವಾಗಿರುತ್ತದೆಯಲ್ಲವೇ? ಜೀವಂತವಾಗಿರಲಾರದೆ? ಅಂದರೆ, ಮತ್ತಷ್ಟು ಸರಿಯಾದ ಪ್ರಶ್ನೆಗಳನ್ನು ಜೀವಂತವಾದ ಪ್ರಶ್ನೆಗಳನ್ನು ಎಬ್ಬಿಸಬಲ್ಲ, ಮತ್ತಷ್ಟು ತನ್ನ ಪ್ರಜ್ಞೆಯನ್ನು ವಿಸ್ತರಿಸಬಲ್ಲ ಉತ್ತರ. ನಿಜಕ್ಕಾದರೆ ದೇವರನ್ನು ಉತ್ತರವೆಂದು ಹೇಳುವುದೇ ಸರಿಯಲ್ಲ. ಅದನ್ನು ಜೀವಂತಿಕೆ ಎಂದೇ ಹೇಳಬೇಕು. ಅಹಂಕಾರಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳೂ ಹುಸಿಯಾಗಿ ಬಿದ್ದು ಹೋಗಿ, ಜೀವನ್ಮರಣ ಸಮಸ್ಯೆಯಾಗಿ ತನ್ನನ್ನು ಕಾಡಿದ ಪ್ರಶ್ನೆಗೆ ಉತ್ತರವೆಂಬಂತೆ ಕಂಡುಕೊಂಡದ್ದು ಅದು. ಬಯಲು ಆಲಯದೊಳಗೋ! ಆಲಯವು ಬಯಲೊಳಗೋ!! ಬಯಲು ಆಲಯವೆರಡು ನಯನದೊಳಗೋ! ನಯನ ಬುದ್ಧಿಯ ಒಳಗೊ! ಬುದ್ಧಿ ನಯನದ ಒಳಗೊ! ನಯನ– ಬುದ್ಧಿಗಳೆರಡು ನಿನ್ನೊಳಗೋ ಹರಿಯೇ!! ಎಂದು ಹಾಡಿದಾಗ ಹರಿ; ಎಂಬ ಉತ್ತರ, ನಮ್ಮ ಪ್ರಶ್ನೆ, ನಮ್ಮ ಸಮಸ್ಯೆ ನಮ್ಮ ಅನುಭವಗಳನ್ನು ಒಳಗೊಳ್ಳುವ ವಿಶ್ವಾನುಭವವೆಂದಾಯಿತಲ್ಲದೆ, ನಮ್ಮ ಅನುಭವವನ್ನು ಮೊಟಕುಗೊಳಿಸುವ ಉತ್ತರ ಎಂದಾಗಲಿಲ್ಲವಲ್ಲ. ಕವಿ, ಹೀಗೇಕೆ ತಿಳಿಯಬಾರದು? ಅವನು ಹೀಗೆ ತನ್ನನ್ನು ಪ್ರಶ್ನಿಸುವುದು ಕೂಡ ಆ ಪ್ರಶ್ನೆಯ ಜತೆಗೇ ನನ್ನ ಅನುಭವದಲ್ಲಿ ಬೆರೆತು ಮತ್ತೆ ವಿಶ್ವಾನುಭವದಲ್ಲಿ ಒಂದಾಗುವುದಕ್ಕಾಗಿಯೆ? ಎಂದು ದಾಸ ಚಿಂತಿಸಬಹುದು.

■ ತೋಷ

## ಮಾತೇ ಮುತ್ತು

★ ತಾನು ಮಾಡದ ಒಳ್ಳೆಯ ಕೆಲಸಕ್ಕಾಗಿ ಪ್ರತಿಯೊಬ್ಬನೂ ತಪ್ಪಿತಸ್ಥನೇ.

–ವಾಲ್ಟೇರ್

★ ಕೀರ್ತಿ ಎನ್ನುವುದು ನೀರಿನಲ್ಲಿ ವರ್ತುಲ ಉಂಟಾದಂತೆ. ವರ್ತುಲ ದೊಡ್ಡದಾಗುತ್ತಲೇ ಇರುತ್ತದೆ. ದೊಡ್ಡದಾದಂತೆಯೇ ಕರಗುತ್ತದೆ.

–ವಿಲಿಯಂ ಷೇಕ್ಸ್‌ಪಿಯರ್

★ ದೇವರ ಮುಂದೆ ನಾವೆಲ್ಲರೂ ಸಮಾನವಾಗಿ ಬುದ್ಧಿವಂತರೂ, ಮೂರ್ಖರೂ ಆಗಿರುತ್ತೇವೆ.

–ಆಲ್ಬರ್ಟ್ ಐನ್‌ಸ್ಟೀನ್

★ ಸಂಬಳಕ್ಕಾಗಿ ಮಾಡುವ ಎಲ್ಲ ಕೆಲಸಗಳೂ ಅಸಂಗತ ಮತ್ತು ಬುದ್ಧಿಯನ್ನು ಕುಂಠಿತಗೊಳಿಸುತ್ತವೆ.

–ಅರಿಸ್ಟಾಟಲ್

★ ಭೂತಕಾಲ ಮತ್ತು ವರ್ತಮಾನದ ಮಧ್ಯೆ ಜಗಳ ಹಚ್ಚಿಕೊಂಡುಬಿಟ್ಟರೆ, ನಮ್ಮ ಭವಿಷ್ಯ ಕಣ್ಮರೆಯಾಗುತ್ತದೆ.

–ವಿನ್‌ಸ್ಟನ್ ಚರ್ಚಿಲ್

★ ಯಾವತ್ತೂ ತಲೆ ತಗ್ಗಿಸಬೇಡಿ. ತಲೆಯೆತ್ತಿ ನಡೆದರೆ ನಿಮ್ಮ ದೃಷ್ಟಿಗೆ ಎಲ್ಲವೂ ನೇರವಾಗಿ ಕಾಣಿಸುತ್ತದೆ.

–ಹೆಲೆನ್ ಕೆಲ್ಲರ್

★ ಗ್ರಾಹಕರಿಗೆ ಏನು ಬೇಕೆಂದು ಕೇಳಿ ಅದನ್ನು ಉತ್ಪಾದಿಸಲು ಹೊರಟರೆ ಸಮಯ ತಗುಲುತ್ತದೆ. ಆ ಹೊತ್ತಿಗೆ ಗ್ರಾಹಕನ ಇಚ್ಛೆ ಬದಲಾಗಿರುತ್ತದೆ.

–ಸ್ಟೀವ್ ಜಾಬ್ಸ್

★ ಜನರಿಗೆ ಸತ್ಯ ಹೇಳಬೇಕೆಂದಿದ್ದರೆ ಮೊದಲು ಅವರನ್ನು ನಗಿಸಿ. ಇಲ್ಲವಾದಲ್ಲಿ ಅವರು ನಿಮ್ಮ ಕೊಂದೇ ಬಿಡಬಹುದು.

–ಆಸ್ಕರ್ ವೈಲ್ಡ್

★ ಪ್ರಾಮಾಣಿಕ ಭಿನ್ನಮತವಿದ್ದರೆ ಬಹಳಷ್ಟು ಸಲ ಅದೇ ಪ್ರಗತಿಯ ಆರೋಗ್ಯಕರ ಸಂಕೇತಗಳಾಗುತ್ತವೆ.

–ಮಹಾತ್ಮ ಗಾಂಧಿ

★ ತಪ್ಪುಗಳ ಬಗ್ಗೆ ನಾಚಿಕೆ ಪಟ್ಟುಕೊಳ್ಳಬೇಡಿ. ಸಹಾ ಹಾಗೆ ಮಾಡಿದರೆ ಅವೇ ಅಪರಾಧಗಳಾಗುತ್ತವೆ.

–ಕನ್‌ಫ್ಯೂಷಿಯಸ್

★ ಪ್ರಾಣಿಗಳಲ್ಲೇ ಅತ್ಯಂತ ಕ್ರೂರ ಮನುಷ್ಯ.

–ಫ್ರೆಡ್ರಿಕ್ ನೀಟ್ಸೆ